ಓ ಎಸ್ ನಂ.59/2024

ಪಿ.ಡಬ್ಲ್ಯೂ-2 ಅಹಿಲ್ಯಾಬಾಯಿ ಗಂಡ ಚಂದ್ರಕಾಂತ ಕುಲಕರ್ಣಿ

**(ಇಂದು ದಿನಾಂಕಃ 17-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಪಿ ಎಂ ಕೆ ವಕೀಲರಿಂದ.

ನನ್ನ ಗಂಡನಿಗೆ ಮತ್ತು ಅವರ ಸಹೋದರರಿಗೆ ತಲಾ ೧೦ ಎಕರೆಯಂತೆ ಜಮೀನು ಪಾಲಿಗೆ ಬಂದಿದೆ ಎಂದರೆ ಸರಿ. ನಾನು ಯಾವುದೆ ಕೆಲಸ ಮಾಡುವುದಿಲ್ಲ, ಮನೆಗೆಲಸ ಮಾತ್ರ ಮಾಡುತ್ತೇನೆ ಎಂದರೆ ಸರಿ. ನನ್ನ ಮಗ ಅಮರ ಶಾಲೆ ಕಲಿತು, ಈಗ ಪಿ ಎಸ್ ಐ ಆಗಿ, ಕೆಲಸ ಮಾಡುತ್ತಿದ್ದಾನೆ ಎಂದರೆ ಸರಿ. ನನ್ನ ಮಗ ಅಮರನಿಗೆ ಶಾಲೆಯನ್ನು ಬಿಟ್ಟು ನಾವು ಯಾವುದೆ ಕೆಲಸ ಮಾಡಲು ಅವರನ್ನು ಹಚ್ಚಿಲ್ಲ ಎಂದರೆ ಸರಿ. ನನಗೆ ಕನ್ನಡ ಮತ್ತು ಇಂಗ್ಲೀಷ್ ಓದಲು ಮತ್ತು ಬರೆಯಲು ಬರುವುದಿಲ್ಲ. ಮೃತ್ಯುಪತ್ರವನ್ನು ಯಾರು ಬೆರಳಚ್ಚು ಮಾಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮೃತ್ಯುಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ದತ್ತಕ ತೆಗೆದುಕೊಂಡು ಕುರಿತು ಬರೆಯಲಾಗಿದೆ ಎನ್ನುತ್ತಾರೆ. ನನ್ನ ಮಗ ಅಮರರವರನ್ನು ದತ್ತಕ ತೆಗೆದುಕೊಂಡ ಕುರಿತು ಮೃತ್ಯುಪತ್ರದಲ್ಲಿ ಬರೆಯಲಾಗಿದೆ.

೨. ನನ್ನ ಮುಖ್ಯ ವಿಚಾರಣೆಯ ೪ ನೇ ಖಂಡಿಕೆಯಲ್ಲಿ ಅಪ್ಪಸಾಬರವರ ಅನಾರೋಗ್ಯದ ಕುರಿತು ತಿಳಿಸಿದ್ದು, ಅವರಿಗೆ ಯಾವ ಕಾಯಿಲೆ ಇತ್ತು ಎಂದರೆ ಸಾಕ್ಷಿಯು ಅವರಿಗೆ ಯಾವುದೆ ಕಾಯಿಲೆ ಇರಲಿಲ್ಲ, ಅವರು ಆರೋಗ್ಯವಾಗಿಯೆ ಇದ್ದರು ಎನ್ನುತ್ತಾರೆ. ಮೃತ್ಯುಪತ್ರದಲ್ಲಿ ಅಪ್ಪಸಾಬರವರು ಮಾನಸಿಕವಾಗಿ ಅಸ್ವಸ್ಥರು ಇದ್ದರು ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಅಪ್ಪಸಾಬರವರು ಆರೋಗ್ಯವಾಗಿಯೆ ಇದ್ದರು ಎನ್ನುತ್ತಾರೆ. ಅಪ್ಪಸಾಬರವರು

ಮಾನಸಿಕವಾಗಿ ಅಸ್ವಸ್ಥರಾಗಿದ್ದ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಅವರು ಆರೋಗ್ಯವಾಗಿ ಇದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪ್ಪಸಾಬರವರು ನನ್ನ ಪ್ರಕಾರ ಆರೋಗ್ಯವಾಗಿಯೆ ಇದ್ದರು, ಅವರಿಗೆ ಯಾವುದೆ ತರಹದ ಕಾಯಿಲೆ ಇರಲಿಲ್ಲ. ಅಪ್ಪಸಾಬರವರಿಗೆ ಯಾವುದೆ ವೈದ್ಯಕೀಯ ವೆಚ್ಚಗಳು ಇರಲಿಲ್ಲ.

೩. ಈ ದಿನ ನ್ಯಾಯಾಲಯದಲ್ಲಿರುವ ಮಹಿಳೆಯಾದ ಪ್ರತಿವಾದಿ ರಾಮಬಾಯಿ ಆಗಿದ್ದು, ಅವರು ನನ್ನ ಗಂಡನ ತಮ್ಮನಾದ ಅಪ್ಪಸಾಹೆಬರವರ ಹೆಂಡತಿ ಆಗಿರುತ್ತಾರೆ. ಪ್ರತಿವಾದಿ ಮತ್ತು ಅಪ್ಪಸಾಬರವರ ಮದುವೆಯಾಗಿ ಸುಮಾರು ೧೦ ವರ್ಷಗಳಾಗಿರುತ್ತವೆ. ಪ್ರತಿವಾದಿಯಾದ ರಾಮಬಾಯಿರವರ ತವರು ಮನೆ ಆಳಂದ ತಾಲೂಕಿನ ಮಟಗಿ ಗ್ರಾಮವಾಗಿರುತ್ತದೆ. ಪ್ರತಿವಾದಿಯ ಮದುವೆಯ ಮೊದಲು ಅವರ ಬೀಗರು ಯಾರೂ ನಮ್ಮ ಊರಿನಲ್ಲಿ ಇರಲಿಲ್ಲ. ಮದುವೆಯಾದ ಮೇಲೆ ಪ್ರತಿವಾದಿ ನಮ್ಮ ಊರಿಗೆ ಸಂಬಂಧಪಟ್ಟಿರುತ್ತಾರೆ. ಪ್ರತಿವಾದಿ ಮತ್ತು ಅವರ ಗಂಡ ಅಪ್ಪಸಾಬರವರು ಮದುವೆಯಾದ ಮೇಲೆ ಜಂಟಿಯಾಗಿ ೨೦೦೩ ರಲ್ಲಿ ಜಮೀನಿನ ಪಹಣಿ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಮದುವೆಯಾದಾಗಿನಿಂದ ಪ್ರತಿವಾದಿಯೆ ದಾವಾ ಜಮೀನಿನ ಸಾಗುವಳಿ ಮಾಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ನಾವು ಮತ್ತು ನಮ್ಮ ಮಕ್ಕಳು ಸಾಗುವಳಿ ಮಾಡುತ್ತಿದ್ದೇವೆ ಎನ್ನುತ್ತಾರೆ. ೨೦೧೬ ರಲ್ಲಿ ದಾವಾ ಜಮೀನಿನಲ್ಲಿ ತಕರಾರು ಮಾಡಬಾರದು ಎಂದು ಪ್ರತಿವಾದಿಯು ನನ್ನ ಗಂಡ ಮತ್ತು ಅವರ ಅಣ್ಣತಮ್ಮಂದಿರ ಮೇಲೆ ಓ ಎಸ್ ನಂಬರ ೭೪/೨೦೧೬ ದಾವೆ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ.

೪. ದಾವಾ ಜಮೀನಿನ ಮೇಲೆ ಬೇರೆಯವರು ಕೇಸು ಹಾಕಿದ ವಿಚಾರ ನನಗೆ ಗೊತ್ತಿಲ್ಲ. ನನ್ನ ಗಂಡ ಮತ್ತು ಅವರ ಸಹೋದರರು ಸುನೀಲ್ ಎಂಬುವ ವ್ಯಕ್ತಿಯನ್ನು ಮುಂದೆ

ಮಾಡಿ, ಓ ಎಸ್ ನಂಬರ ೬/೨೦೧೯ ಎಂಬ ದಾವೆಯನ್ನು ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಮತ್ತು ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಒಂದು ಸುಳ್ಳು ದಾಖಲೆಯನ್ನು ಸೃಷ್ಠಿಸಿಕೊಂಡು ಸಲ್ಲಿಸಿ, ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗಾಗಲಿ ಹಾಗೂ ನನ್ನ ಮಗ ಅಮರನಿಗಾಗಲಿ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.